# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2241
2. ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 26.03.2026
4. ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಒಂದು ವಲಯದಿಂದ ಇನ್ನೊಂದು ವಲಯಕ್ಕೆ ಅಥವಾ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ವರ್ಗಾವಣೆ ಬಯಸುವ ಪೊಲೀಸ್ ಸಬ್ ಇನ್‌ಸ್‌ಪೆಕ್ಟರ್‌ಗಳಿಗೆ 7 ವರ್ಷದ ಸೇವಾ ಜೇಷ್ಠತೆ ಬಿಟ್ಟುಕೊಡಬೇಕೆಂಬ ಷರತ್ತು ವಿಧಿಸಲಾಗಿದೆಯೇ; ಈ ಕುರಿತು ಜಾರಿಯಲ್ಲಿರುವ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ (ವರ್ಗಾವಣೆ) (ವಿಶೇಷ) ನಿಯಮಗಳು 2022 ಯಲ್ಲಿನ ತಿದ್ದುಪಡಿ ಯಾವ ದಿನಾಂಕದಿಂದ ಜಾರಿಯಲ್ಲಿದೆ. | ಹೌದು, ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ (ವರ್ಗಾವಣೆ) (ವಿಶೇಷ) ನಿಯಮಗಳು-2022ರಂತೆ ಪೊಲೀಸ್ ಕಾನ್ಸ್‌ಟೇಬಲ್ ವೃಂದದಿಂದ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ವೃಂದದ ಎಲ್ಲಾ ಅಧಿಕಾರಿ /ಸಿಬ್ಬಂದಿಗಳು ಒಂದು ವಲಯದಿಂದ ಇನ್ನೊಂದು ವಲಯಕ್ಕೆ ಅಥವಾ ಒಂದು ಜೇಷ್ಠತಾ ಘಟಕದಿಂದ ಇನ್ನೊಂದು ಜೇಷ್ಠತಾ ಘಟಕಕ್ಕೆ ವರ್ಗಾವಣೆ ಹೊಂದಬೇಕಾದಲ್ಲಿ ಕನಿಷ್ಠ 07 ವರ್ಷಗಳ ಸೇವೆಯನ್ನು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಹುದ್ದೆ ಮತ್ತು ಸ್ಥಳದಲ್ಲಿ ಪೂರ್ಣಗೊಳಿಸಬೇಕು. ಅಲ್ಲದೇ ಕೆ.ಸಿ.ಎಸ್ (ಸಾಮಾನ್ಯ ನೇಮಕಾತಿ) ನಿಯಮಗಳು,1977 ರ ನಿಯಮ -16ಎ ರಂತೆ ಸರ್ಕಾರಿ ನೌಕರನು ಪತಿ –ಪತ್ನಿ ಪ್ರಕರಣದಲ್ಲಿ ಮಾತ್ರ ಒಂದು ಘಟಕದಿಂದ ಇನ್ನೊಂದು ಘಟಕಕ್ಕೆ ವರ್ಗಾವಣೆ ಹೊಂದಲು ಅವಕಾಶವಿದ್ದು, ಸರ್ಕಾರಿ ನೌಕರನು ಕನಿಷ್ಠ 07 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ.<br><br>ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ (ವರ್ಗಾವಣೆ) (ವಿಶೇಷ) ನಿಯಮಗಳು 2022 ಅನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ಹೆಚ್‌ಡಿ 93 ಪಿಪಿಎಸ್ 2022 ದಿನಾಂಕ:22.02.2023ರ ಮೂಲಕ ಜಾರಿಗೆ ತರಲಾಗಿದೆ. |
| ಆ. | ಏಳು ವರ್ಷ ಸೇವೆ ಪೂರ್ಣಗೊಳಿಸಿದ ನಂತರ ವರ್ಗಾವಣೆಗೆ ಅರ್ಜಿ ಸಲ್ಲಿಸುವ ಎಸ್‌ಐಗಳು ಬೇರೊಂದು ವಲಯಕ್ಕೆ ವರ್ಗಾವಣೆಗೊಂಡಲ್ಲಿ ಸೇವಾ ಜೇಷ್ಠತೆ ಬಿಟ್ಟುಕೊಡಬೇಕೆಂಬ ನಿಯಮಕ್ಕೆ ಕಾರಣವೇನು; ಈ ನಿಯಮದಿಂದ ಎಸ್‌ಐ ವರ್ಗದ ಅಧಿಕಾರಿಗಳಿಗೆ ಉಂಟಾಗುತ್ತಿರುವ ಅಸಮಾಧಾನ ಮತ್ತು ಕಾನೂನು ಹೋರಾಟದ ಹಿನ್ನೆಲೆ ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತಾ) ನಿಯಮಗಳು-1957 ರ ನಿಯಮ -6ರ ಅನುಸಾರ ಸರ್ಕಾರಿ ನೌಕರನನ್ನು ವಿನಂತಿಯ ಮೇರೆಗೆ ವರ್ಗಾವಣೆ ಮಾಡಿದ್ದಲ್ಲಿ, ಆತನು ವರ್ಗಾವಣೆಯಾದ ವರ್ಗ ಅಥವಾ ಶ್ರೇಣಿಯ ಜ್ಯೇಷ್ಠತಾ ಪಟ್ಟಿಯಲ್ಲಿ ಆತನನ್ನು, ವರ್ಗಾವಣೆಯ ಸೇವೆಯ ವರ್ಗ ಅಥವಾ ಶ್ರೇಣಿಯನ್ನು ಹೊಂದಿದ್ದ ಎಲ್ಲಾ ಅಧಿಕಾರಿಗಳ ಕೆಳಗೆ ಅವರನ್ನು ಸೇರ್ಪಡೆಗೊಳಿಸಬೇಕಾಗಿರುತ್ತದೆ.<br><br>ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ (ವರ್ಗಾವಣೆ) (ವಿಶೇಷ) ನಿಯಮಗಳು-2022 ಹಾಗೂ ಕೆಸಿಎಸ್ (ಸಾಮಾನ್ಯ ನೇಮಕಾತಿ ನಿಯಮಗಳು-1977 ರ ನಿಯಮ -16ಎ ರಂತೆ ಪಿಎಸ್‌ಐ ರವರುಗಳು ಪತಿ –ಪತ್ನಿ ಪ್ರಕರಣದಲ್ಲಿ ಮಾತ್ರ ಒಂದು ಘಟಕದಿಂದ ಇನ್ನೊಂದು ಘಟಕಕ್ಕೆ ವರ್ಗಾವಣೆ ಹೊಂದಲು ಕನಿಷ್ಠ 07 ವರ್ಷಗಳ ಸೇವೆಯನ್ನು ಸದರಿ ಹುದ್ದೆಯಲ್ಲಿ ಪೂರ್ಣಗೊಳಿಸಬೇಕಾಗಿರುತ್ತದೆ. ಇಲಾಖೆಯ ವರ್ಗಾವಣೆ ನಿಯಮದಲ್ಲಿ ಮಾಜಿ ಸೈನಿಕ ಪ್ರಕರಣಕ್ಕೆ ವಿಶೇಷ ಆದ್ಯತೆಯನ್ನು ನೀಡಿ ಕನಿಷ್ಠ 03 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿರುವ ಮಾಜಿ ಸೈನಿಕರಿಗೂ ಸಹ ವರ್ಗಾವಣೆ ಅವಕಾಶ ಕಲ್ಪಿಸಲಾಗಿರುತ್ತದೆ. |

| | | |
|---|---|---|
| | | ಅಂತರ್ ಘಟಕ ವರ್ಗಾವಣೆ ಹೊಂದಲು ಪಿಎಸ್‌ಐ ರವರುಗಳು ಕನಿಷ್ಠ 07 ವರ್ಷಗಳ ಸೇವೆಯನ್ನು ಪೂರೈಸಿರಬೇಕೆಂದು ಹಾಗೂ ಸೇವಾ ಹಿರಿತನವನ್ನು ಬಿಟ್ಟುಕೊಡುವ ಷರತ್ತುಗಳನ್ನು ಕೈಬಿಡಲು ಪಿಎಸ್‌ಐ ಗಳು ಒತ್ತಾಯಿಸಿರುತ್ತಾರೆ ಹಾಗೂ ಈ ಸಂಬಂಧ ಪಿಎಸ್‌ಐಗಳು ಘನ ಉಚ್ಛ ನ್ಯಾಯಾಲಯದಲ್ಲಿ ಅರ್ಜಿಯನ್ನು ದಾಖಲಿಸಿರುತ್ತಾರೆ. |
| ಇ. | ಪತಿ-ಪತ್ನಿ ಪ್ರಕರಣಗಳಲ್ಲಿ 7 ವರ್ಷ ಸೇವೆ ಪೂರೈಸಿದ ಬಳಿಕವೇ ವರ್ಗಾವಣೆಗೆ ಅವಕಾಶ ನೀಡುವ ನಿಯಮ ಮಾನವೀಯ ಹಾಗೂ ಆಡಳಿತಾತ್ಮಕ ದೃಷ್ಟಿಯಿಂದ ಸಮಂಜಸವೇ; ವರ್ಗಾವಣೆಗೆ ಜೇಷ್ಠತೆ ಬಿಟ್ಟುಕೊಡಬೇಕೆಂಬ ನಿಯಮವಿದ್ದಲ್ಲಿ, ಅದೇ ನಿಯಮವನ್ನು ಮುಂಬಡ್ತಿಗೆ ಅನ್ವಯಿಸದಿರುವುದಿರಲು ಕಾರಣವೇನು; | ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ (ವರ್ಗಾವಣೆ) (ವಿಶೇಷ) ನಿಯಮಗಳು-2022 ಅನ್ನು ಹೊರತುಪಡಿಸಿದರೂ ಸಹ ಕೆಸಿಎಸ್ (ಸಾಮಾನ್ಯ ನೇಮಕಾತಿ ನಿಯಮಗಳು-1977 ರ ನಿಯಮ -16ಎರಂತೆ ಸರ್ಕಾರಿ ನೌಕರನು ಪತಿ-ಪತ್ನಿ ಪ್ರಕರಣದಲ್ಲಿ ಒಂದು ಜೇಷ್ಠತಾ ಘಟಕದಿಂದ ಇನ್ನೊಂದು ಜೇಷ್ಠತಾ ಘಟಕಕ್ಕೆ ವರ್ಗಾವಣೆ ಹೊಂದಬೇಕಾದಲ್ಲಿ ಕನಿಷ್ಠ 07 ವರ್ಷಗಳ ಸೇವೆಯನ್ನು ಪೂರೈಸಿರಬೇಕಾಗಿರುತ್ತದೆ. ಸದರಿ ನಿಯಮವು ಇಲಾಖೆಯ ಕಾರ್ಯನಿರ್ವಹಣೆ ಮತ್ತು ಆಡಳಿತಕ್ಕೆ ಪೂರಕವಾಗಿರುತ್ತದೆ<br><br>ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಪಿಎಸ್‌ಐ ಹುದ್ದೆಗೆ ಮುಂಬಡ್ತಿ ಹೊಂದಬೇಕಾದಲ್ಲಿ ಕನಿಷ್ಠ 8 ವರ್ಷಗಳ ಸೇವೆಯನ್ನು ಎಎಸ್‌ಐ ಹುದ್ದೆಯಲ್ಲಿ ನಿರ್ವಹಿಸಬೇಕಾಗಿರುತ್ತದೆ. ಕನಿಷ್ಠ 8 ವರ್ಷಗಳ ಸೇವೆಯನ್ನು ಪೂರೈಸಿರುವ ಸಿಬ್ಬಂದಿಗಳು ಲಭ್ಯವಿಲ್ಲದಿದ್ದಲ್ಲಿ 4 ವರ್ಷಗಳ ಸೇವೆಯನ್ನು ಪೂರೈಸಿರುವ ಸಿಬ್ಬಂದಿಗಳನ್ನು ಪರಿಗಣಿಸಲು ಪೂರಕವಾಗುವಂತೆ ನಿಯಮಗಳಲ್ಲಿ ಅವಕಾಶವನ್ನು ಮಾಡಲಾಗಿರುತ್ತದೆ. |
| ಈ. | ಸೇವಾ ಜೇಷ್ಠತೆಗೆ ಧಕ್ಕೆಯಾಗದಂತೆ ವರ್ಗಾವಣೆಗೆ ಅವಕಾಶ ಕಲ್ಪಿಸುವಂತೆ ಹಿಂದಿನ ನಿಯಮಾವಳಿಯನ್ನು ಪುನರ್‌ಸ್ಥಾಪಿಸಲು ಸರ್ಕಾರ ಪರಿಗಣಿಸುತ್ತಿದೆಯೇ; ಯಾವ ಕಾಲಮಿತಿಯೊಳಗೆ ಈ ಕುರಿತು ಕ್ರಮವಹಿಸಲಾಗುವುದು; | ಒಂದು ಜೇಷ್ಠತಾ ಘಟಕದಿಂದ ಇನ್ನೊಂದು ಜೇಷ್ಠತಾ ಘಟಕಕ್ಕೆ ವರ್ಗಾವಣೆ ಬಯಸುವ ಎಲ್ಲಾ ಸರ್ಕಾರಿ ನೌಕರರು (ಪಿಎಸ್‌ಐ ಸೇರಿದಂತೆ) ಸಹ ತಮ್ಮ ಸೇವಾ ಜೇಷ್ಠತೆಯನ್ನು ಬಿಟ್ಟುಕೊಡಬೇಕಾಗಿರುತ್ತದೆ.<br>ಪಿ.ಎಸ್.ಐ ವೃಂದದ ಹುದ್ದೆಗಳು ವಲಯ ಮತ್ತು ಕಮೀಷನರೇಟ್ ಘಟಕಗಳ ಹುದ್ದೆಗಳಾಗಿದ್ದು, ಪಿಎಸ್‌ಐರವರುಗಳು ಒಂದು ಘಟಕದಿಂದ ಇನ್ನೊಂದು ಜೇಷ್ಠತಾ ಘಟಕಕ್ಕೆ ವರ್ಗಾವಣೆ ಹೊಂದುವುದಾದಲ್ಲಿ ತಮ್ಮ ಸೇವಾ ಜೇಷ್ಠತೆಯನ್ನು ಬಿಟ್ಟುಕೊಡಬೇಕಾಗಿರುವುದು ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತಾ) ನಿಯಮಗಳು-1957 ರ ನಿಯಮ - 6ರ ಪರಂತು (1)ರನ್ವಯ ಕ್ರಮಬದ್ಧವಾಗಿರುತ್ತದೆ. ಸದರಿ ನಿಯಮವನ್ನು ಕೈಬಿಡುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |
| ಉ. | ಪೊಲೀಸ್ ಸಿಬ್ಬಂದಿಗಳು ಈಗಾಗಲೇ ರಜೆ ನಿರಾಕರಣೆ, ಸಿಬ್ಬಂದಿ ಕೊರತೆ, ಬಹು ವಿಧ ಜವಾಬ್ದಾರಿ ಇತ್ಯಾದಿ ಹಲವು ಒತ್ತಡಗಳೊಂದಿಗೆ ಸೇವೆ ಸಲ್ಲಿಸುತ್ತಿದ್ದು, ಸೇವಾ ನಿಯಮಗಳನ್ನು ಪೊಲೀಸ್ ಸ್ನೇಹಿಯಾಗಿ ಮಾರ್ಪಡಿಸುವ ಬಗ್ಗೆ ಸರ್ಕಾರ ಯಾವ ಕ್ರಮವಹಿಸಲುದ್ದೇಶಿಸಿದೆ? | ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ನಿಯಮಾವಳಿಗಳು ಇಲಾಖೆಯ ಕಾರ್ಯ ನಿರ್ವಹಣೆ, ಆಡಳಿತಕ್ಕೆ ಪೂರಕವಾಗಿರುತ್ತದೆ ಹಾಗೂ ಅಧಿಕಾರಿ/ಸಿಬ್ಬಂದಿಗಳಿಗೆ ಸ್ನೇಹಿಯಾಗಿದ್ದು, ಸದರಿ ನಿಯಮಾವಳಿಗಳನ್ನು ಮಾರ್ಪಡಿಸುವ ಅಗತ್ಯವಿರುವುದಿಲ್ಲ. |

**ಒಇ 79 ಪಿಪಿಎಸ್ 2026**

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು